ಪೇರಾಗಬೇತ್ತದೆ. ಆದ್ದರಿಂದ, ಇನ್ನು ಮುಂದೆ ಈ ರೀತಿ ತಾತ್ಸಾರ ಭಾವನೆಯನ್ನು ತೋರಿಸತಕ್ಕ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡು ರೈತರಿಗೆ ವ್ಯವಸಾಯಕ್ಕೆ ಅವಶ್ಯಕವಾಗಿ ಬೇಕಾದ ವಸ್ತುಗಳು ಸಕಾಲದಲ್ಲಿ ಸರಬರಾಜಾಗುವಂತೆ ಕ್ರಮ ಕೈಗೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಎಸ್. ಬಂಗಾರಪ್ಪ.—ತೊಗರಿ, ಹೆಸರುಕಾಳುಗಳ ಬಿತ್ತನೆ ಬೀಜದ ಬಗ್ಗೆ ಹೇಳಿದ್ದೀರಿ. ಅದಕ್ಕೆ ನನ್ನ ಅಭಿನಂದನೆಗಳು. ಇದರ ಜೊತೆಗೆ ಉದ್ದಿನ ಕಾಳನ್ನೂ ಸೇರಿಸಿಕೊಳ್ಳಬೇಕು. ನಮ್ಮ ಕರ್ನಾಟಕದಲ್ಲಿ ಇನ್ನೂ ಕೆಲವು ಬಿತ್ತನೆ ಬೀಜಗಳ ಕೊರತೆ ಇದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೀಜ ಇದೆ, ಇಲ್ಲವೆಂದು ಹೇಳುತ್ತಿಲ್ಲ. ಆದರೆ ಅದರ ಗುಣಮಟ್ಟ ಸರಿಯಿಲ್ಲವೆಂದು ಆದನ್ನು ರಿಲೀಸ್ ಮಾಡಬಾರದೆಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಒಳ್ಳೆಯ ಬೀಜದ ತಳಿಗಳನ್ನು ಕೊಡದಿದ್ದಲ್ಲಿ ಹೆಚ್ಚಿನ ಉತ್ಪಾದನೆಯನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಅಂಥ ಬೀಜಗಳನ್ನು ನಮ್ಮ ರೈತರಿಗೆ ಒದಗಿಸುವುದೂ ಕೂಡ ಒಳ್ಳೆಯದಲ್ಲವೆಂದು ನನ್ನ ಭಾವನೆಯಾಗಿರುತ್ತದೆ. ಒಳ್ಳೆಯ ಬೀಜವನ್ನು ಮಾರಾಟ ಮಾಡುವುದರ ಬಗ್ಗೆ ಮತ್ತು ಅದರ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಹೆಚ್ಚಿನ ಗಮನವನ್ನು ಕೊಡಬೇಕೆಂದು ಸಂಬಂಧಪಟ್ಟವರಿಗೆ ಆದೇಶಿಸಿದ್ದೇನೆ. ಮಾನ್ಯ ಸದಸ್ಯರು ಏನು ಕೆಲವು ಬಿತ್ತನೆ ಬೀಜಗಳ ಹೆಸರು ಹೇಳಿದರು, ತೊಗರಿ ಹೆಸರು. ಜೊತೆಗೆ ಉದ್ದು ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯತಕ್ಕಂಥ ಭಾಗಗಳಲ್ಲಿ ಸರಬರಾಜು ಮಾಡಲು ನಮ್ಮ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಮತ್ತೆ ಬಿತ್ತನೆ ಬೀಜ ಸರಬರಾಜು ಮಾಡುವುದರಲ್ಲಿ ಯಾವ ಅಭಾಸವಾಗದಂತೆ ನೋಡಿ ಕೊಳ್ಳಲು ಶಕ್ತಿ ಮೀರಿ ಪ್ರಯತ್ನ ಮಾಡುವುದಾಗಿಯೂ ಮಾನ್ಯ ಸದಸ್ಯರಲ್ಲಿ ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರು ಹೇಳಿದಂತೆ ಅಧಿಕಾರಿಗಳಲ್ಲಿ ತಪ್ಪಾಗಿದ್ದಲ್ಲಿ ಒಂದುವೇಳೆ ಅಧಿಕಾರಿಗಳು ಆದೇಶವನ್ನು ಕೊಟ್ಟಿರುವಂತೆ ಕೆಲಸ ಮಾಡಿದ್ದರೆ ಆ ಬಗ್ಗೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೂ ಹಿಂದೆ ಬೀಳುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

MR. SPEAKER.—Mr. M. V. Venkatappa, I have received a letter from the Hon. Minister Mr. Yahya, stating that he is proceeding to Mysore to attend Peace Committee meeting being held today. I am putting up this particular call attention notice to be taken up tomorrow, if you have no objection.

ಅಧ್ಯಕ್ಷರು.—ಈಗ ಷಿಳಿನೇ ನಿಯಮದ ಮೇರೆಗೆ ಚರ್ಚೆ.

(ಮಾನ್ಯ ಸದಸ್ಯರುಗಳಾದ)

ಶ್ರೀ ಟಿ. ಬಿ. ಜಯಚಂದ್ರ, ಶ್ರೀ ಪಿ. ಸಿ. ಸಿದ್ದನಗೌಡ, ಶ್ರೀ ಆರ್. ಡಿ. ಚೌಧರಿ, ಶ್ರೀ ವಿ. ಎಂ. ಇದಿನಬ್ಬ, ಶ್ರೀ ಡಿ. ಬಿ. ಚಂದ್ರೇಗೌಡರವರು ಗೈರು ಹಾಜರಾಗಿದ್ದಾರೆ)

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿ. ಷಿಳಿನೇ ನಿಯಮದ ಮೇರೆಗೆ ವಿಷಯಗಳನ್ನು ಈ ಮನೆಯಲ್ಲಿ ತೆಗೆದುಕೊಳ್ಳಬೇಕಾದರೆ ಮಾನ್ಯ ಸದಸ್ಯರ್ಯಾರಿಗೂ ಇಂಥ ದಿವಸ ಇಂಥ ವಿಷಯವನ್ನು ತೆಗೆದುಕೊಳ್ಳುತ್ತೇವೆಂಬುದಾಗಿ ಇಂಟಿಮೇಷನ್ ಬರುವುದಿಲ್ಲ.

MR. SPEAKER : Intimation is not given, because we should be present here all the time.

ಶ್ರೀ ಎಂ. ವಿ. ವೆಂಕಟಪ್ಪ.—ಮೊದಲು ಎಲ್ಲಾ ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತಿದ್ದರು. ಆಜೆಂಡಾ ಕಳುಹಿಸಿಕೊಡುತ್ತಾರೆಂದು ಹೇಳಿದರೆ ಅದನ್ನೂ ಕೂಡ ಕಳುಹಿಸಿಕೊಡಬೇಕಾದ್ದಿಲ್ಲ, ಅದನ್ನು ಬೇಕಾದರೆ ಇಲ್ಲಿಯೇ ಬಂದು ನೋಡಿಕೊಳ್ಳಬಹುದಲ್ಲ. ಇಂಥ ದಿವಸ ಇಂಥ ಸದಸ್ಯರ ಷಿಳಿನೇ ನಿಯಮದ ಕೆಳಗೆ ಬರುವ ವಿಷಯವನ್ನು ಹಾಕಿಕೊಂಡಿದ್ದೇವೆಂದು ತಿಳಿಸುತ್ತಿದರು.

MR. SPEAKER.—I think, you have a point. I will...

SRI K. LAKKAPPA.—Names of those who have sent questions call attention notices should be called on priority,

ಶ್ರೀ ಎಂ. ವಿ. ವೆಂಕಟಪ್ಪ.—ನಿನ್ನೆ ದಿವಸ ಉತ್ತರ ಕೊಡುವುದರಲ್ಲಿ ಒಂದು ರೀತಿ ಇದ್ದರೆ ಪ್ರಿಂಟಿಂಗ್‌ನಲ್ಲಿ ಒಂದು ರೀತಿ ಇತ್ತು. ಆರ್ಡರ್ ಆಗಿ ಅಂದರೆ ೧–೨–೩–೪–೫ ಈ ರೀತಿಯಲ್ಲಿ ಇರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮುಂದೆ ಉತ್ತರಗಳು ಬರುವ ಸಮಯವಾಗಿ ಬರುವಂತಿರಬೇಕೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಉತ್ತರಗಳು ತಡವಾಗಿ ಬರುತ್ತಿದೆ ಎಂದು ಏನು ಹೇಳಿರುತ್ತಾರೆ ಅದನ್ನು ಗಮನದಲ್ಲಿಟ್ಟು ಕೊಳ್ಳಲಾಗುತ್ತದೆ. ಈಗ ನಿಯಮ ೬೮ರ ಮೇರೆಗೆ ಚರ್ಚೆಯನ್ನು ಮುಂದುವರಿಸುವುದು.

ನಿಯಮ ೬೮ರ ಮೇರೆಗೆ ಚರ್ಚೆ

ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್. (ಕಿತ್ತೂರು) —ಮಾನ್ಯ ಸಭಾಧ್ಯಕ್ಷರೆ, ರೈತರ ಸಾಲದ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಯಾವ ಯಾವ ಸಾಲಗಳನ್ನು ರದ್ದು ಮಾಡಬೇಕು ಎಂಬ ವಿವರಣೆ ಕೇಳಿದ್ದರು. ಸಾಲವನ್ನು ಏಕೆ ರದ್ದು ಮಾಡಬೇಕೆಂದು ಕೇಳಿದ್ದರೆ ಇನ್ನೂ ಉತ್ತಮವಾಗಿತ್ತೆಂದು ನನ್ನ ಅಭಿಪ್ರಾಯ. ರೈತರು ಸಾಲವನ್ನು ರದ್ದು ಮಾಡಿಸಿಕೊಳ್ಳಬೇಕೆಂದು ಸಾಲ ತಂದಿಲ್ಲ. ಸಾಲ ತರುವಾಗ ಹಚ್ಚು ಬೆಳೆ ಬೆಳೆಯಬೇಕೆಂದು ರೈತರು ಸಾಲ ತಂದರು. ಸಾಲ ತಂದು ಭೂಮಿಯಲ್ಲಿ ಬಂಡವಾಳ ತೊಡಗಿಸಿ ಬೆಳೆದರೂ ಸಹ ಸರ್ಕಾರದ ತಪ್ಪು ಬೆಲೆ ನೀತಿಯಿಂದ ಲಾಭವಾಗದ ರೈತರಿಗೆ ಸಾಲದ ಹೊರೆ ಆಯಿತು. ಋಣ ವಿಮೋಚನೆ ಮಾಡುತ್ತೇವೆಂದು ಅನ್ನಬೇಡಿ. ಸರ್ಕಾರದ ತಪ್ಪು ನೀತಿಯಿಂದ ಸಾಲ ಉಳಿದಿದೆ ಎನ್ನುವುದು ರೈತರ ವಾದ. ಯಾವ ಯಾವ ಸಾಲಗಳನ್ನು ರದ್ದು ಮಾಡಬೇಕೆಂದರೆ ೧) ಬೆಳೆ ಸಾಲವನ್ನು ರದ್ದು ಮಾಡಬೇಕು. ಏಕೆಂದರೆ ರೈತರು ಬೆಳೆ ಬೆಳೆದಿದ್ದಾರೆ, ಆದರೆ ಅದಕ್ಕೆ ಯೋಗ್ಯ ದರ ಸಿಕ್ಕಿಲ್ಲ. ಆ ಕಾರಣದಿಂದ ಬೆಳೆ ಸಾಲವನ್ನು ರದ್ದು ಮಾಡಬೇಕು ಈ ಸದನದ ಹಿರಿಯ ಸದಸ್ಯರಾದ ಬಂಗಾರಪ್ಪನವರು ೧೯೮೨ರಲ್ಲಿ ಒಂದು ಬೆಲೆ ಸಮಿತಿಯ ಅಧ್ಯಕ್ಷರಾಗಿ ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ ಕೊಡಬೇಕೆಂದು ಶಿಫಾರಸ್ಸು ಮಾಡಿದ್ದರು. ಈವತ್ತಾದರೂ ಬಂಗಾರಪ್ಪನವರ ಸಮಿತಿ ಶಿಫಾರಸ್ಸಿನ ಪ್ರಕಾರ ಅಂದರೆ ಪೈಸ್ ಇಂಡೆಕ್ಸ್ ಆಧಾರದ ಮೇಲೆ ಆ ದರಗಳನ್ನು ಕೊಟ್ಟರೆ ರೈತರ ಸಾಲವನ್ನು ರದ್ದು ಮಾಡಬೇಕಾಗಿಲ್ಲ. ರೈತರ ಸಾಲವನ್ನು ರದ್ದು ಮಾಡಿದರೆ ಬಹಳ ದೊಡ್ಡ ಉಪಕಾರವಾಗುತ್ತದೆಂದು ನಂಬಿಲ್ಲ. ರೈತರ ಬೆಳೆಗೆ ಯೋಗ್ಯ ಬೆಲೆ ಸಿಗಬೇಕೆಂಬ ವಾದ ಹತ್ತಾರು ವರ್ಷಗಳಿಂದ ಅಂದರೆ ಬ್ಯಾಂಕ್ ರಾಷ್ಟ್ರೀಕರಣವಾದಾಗಿನಿಂದ ಇದೆ. ಆವಾಗಿನಿಂದ ಬೆಲೆ ಸಮಾನತೆ ಉಳಿಯಲಿಲ್ಲ. ಕಾರ್ಖಾನೆಯ ಉತ್ಪಾದನೆಗಳ ವಿಚಾರದಲ್ಲಿ ಮತ್ತು ರೈತನ ಉತ್ಪತ್ತಿ ವಿಚಾರದಲ್ಲಿ ಸರ್ಕಾರ ಸಮಾನತೆ ಸಾಧಿಸುವ ಪ್ರಯತ್ನ ಮಾಡಿಲ್ಲ. ಬ್ಯಾಂಕ್ ರಾಷ್ಟ್ರೀಕರಣ ವಾಗುವ ವರ್ಷ ಅಂದರೆ ೧೯೬೦ರಲ್ಲಿ ಟ್ರಾಕ್ಟರ್ ಬೆಲೆ ೧೮ ಸಾವಿರ ರೂಪಾಯಿ ಇದ್ದರೆ, ಜೋಳ ಒಂದು ಕ್ವಿಂಟಾಲಿಗೆ ೧೦೦ ರೂಪಾಯಿ ಇತ್ತು. ಅಂದರೆ ೧೮೦ ಚೀಲ ಜೋಳ ಮಾರಿದರೆ ರೈತನಿಗೆ ಟ್ರಾಕ್ಟರ್ ಸಿಗುತ್ತಿತ್ತು. ಅದೇ ರೀತಿ ಈಗ ನಾವು ೧೮೦ ಚೀಲ ಜೋಳ ಕೊಡುತ್ತೇವೆ, ಒಂದು ಟ್ರಾಕ್ಟರ್ ಕೊಡಿ, ನಮ್ಮ ಸಾಲವನ್ನು ರದ್ದು ಮಾಡಬೇಕಾಗಿಲ್ಲ. ಬ್ಯಾಂಕ್ ರಾಷ್ಟ್ರೀಕರಣ ಮಾಡಿದಾಗ ಒಂದು ಮೂಟೆ ಸಿಮೆಂಟಿಗೆ ೯ ರೂಪಾಯಿ ೮೮ ಆಣೆ ಇತ್ತು. ಈಗ ನಮಗೆ ಒಂದು ಚೀಲ ಜೋಳಕ್ಕೆ ೧೦ ಮೂಟೆ ಸಿಮೆಂಟ್ ಕೊಟ್ಟರೆ ಸಾಲವನ್ನು ರದ್ದು ಮಾಡಬೇಕಾಗಿಲ್ಲ. ಬ್ಯಾಂಕ್ ರಾಷ್ಟ್ರೀಕರಣ ಮಾಡಿ ರೈತರಿಗೆ ಸಾಲ ಕೊಟ್ಟನಂತರ ರೈತನ ಉತ್ಪತ್ತಿ ಬೆಲೆ ಕಾಸಿಯಿತು ; ಕಾರ್ಖಾನೆಯ ಉಪಕರಣಗಳ ಬೆಲೆ ಹೆಚ್ಚಾಯಿತು. ಈ ಕಾರಣದಿಂದ ಸಾಲ ಉಳಿಯಿತು ಎಂಬ ದೃಷ್ಟಿಯಿಂದ ಬೆಳೆ ಸಾಲವನ್ನು ರದ್ದು ಮಾಡಬೇಕೇ ಹೊರತು ರೈತನಿಗೆ ಉಪಕಾರ ಮಾಡುತ್ತೇವೆಂದು ಮಾಡುವುದಕ್ಕೆ ಹೋಗಬೇಡಿ, ಪರಿಹಾರ ಕೊಡುತ್ತೇವೆ, ಋಣ ವಿಮೋಚನೆ ಮಾಡುತ್ತೇವೆಂದು ಹೇಳಬೇಡಿ. ರೈತನ ಋಣದಲ್ಲಿ ದೇಶ ಬದುಕಿದಾಗ ಅವನ ಋಣ ವಿಮೋಚನೆ ಮಾಡುತ್ತೇವೆಂದರೆ ನಾನು ಒಪ್ಪುವುದಿಲ್ಲ. ಯಾವ ಯಾವ ಸಾಲಗಳನ್ನು ರದ್ದು ಮಾಡಬೇಕೆಂದರೆ ನಾವು ನೀತಿಯಿಂದ ಕೇಳಿದ್ದೆವು. ಟ್ರಾಕ್ಟರ್ ಸಾಲವನ್ನು ರದ್ದು ಮಾಡಬೇಕೆಂದು ಕೇಳಲ್ಲ ಅದು ಆಸ್ತಿಯಾಗಿರುತ್ತದೆ. ಅದನ್ನು ಮಾರಿದರೆ ದುಡ್ಡು ಸಿಗುವುದರಿಂದ ಅದು ಸಾಲವನ್ನು ರದ್ದು ಮಾಡಬೇಕೆಂದು ಕೇಳಲಿಲ್ಲ. ಐ.ಪಿ. ಸೆಟ್ ಸಾಲವನ್ನು ರದ್ದು ಮಾಡಬೇಕೆಂದು ಕೇಳಲ್ಲ. ಟ್ರಿಪ್ಪಾತ್ರ ರದ್ದು ಮಾಡಿ ಎಂದು ಕೇಳಿದ್ದೇವೆ. ಬೆಳೆ ಸಾಲವನ್ನು ಪೂರ್ತಿ ರದ್ದು ಮಾಡಿ ಎಂದು ಕೇಳಿದ್ದೇವೆ, ಏಕೆಂದರೆ ಬೆಳೆಗೆ ಯೋಗ್ಯ ಬೆಲೆ ಸಿಗಲಿಲ್ಲ. ತಂಬಾಕು ಬೆಲೆ ಹತ್ತಿಪ್ಪತ್ತು ವರ್ಷಗಳ ಹಿಂದೆ ಎಷ್ಟಿತ್ತು. ಈಗ ಎಷ್ಟಿತ್ತು, ಬೀಡಿ ಬೆಲೆ ಎಷ್ಟಿದೆ ಎಂದು ಯೋಚನೆ ಮಾಡಿ ರೈತನಿಗೆ ಯೋಗ್ಯ ಬೆಲೆ ಸಿಕ್ಕಿಲ್ಲವಾದ್ದರಿಂದ ಬೆಳೆ ಸಾಲ ರದ್ದಾಗಬೇಕೆಂದು ಹೇಳುತ್ತೇವೆ. ಎರಡನೆಯದಾಗಿ, ಬಿಡಿಂಗ್ ಸಾಲ. ಮಣ್ಣಿನಿಂದ ಬೆಳೆದ ಆಹಾರವನ್ನು ಉಣ್ಣುವವರೆಲ್ಲಾ ಅದನ್ನು ರಕ್ಷಣೆ ಮಾಡುವುದು ಅವರ ಜವಾಬ್ದಾರಿ. ರೈತ ಮಾತ್ರ ಮಣ್ಣನ್ನು ರಕ್ಷಣೆ ಮಾಡಬೇಕೆಂದು ಅಲ್ಲ.